# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೩೦, ಏಪ್ರಿಲ್, ೨೦೨೬ (ವೈಶಾಖ, ೧೦, ಶಕವರ್ಷ, ೧೯೪೮)<br>BENGALURU, THURSDAY, 30, APRIL, 2026 ( VAISHAKHA , 10, SHAKAVARSHA, 1948) | ನಂ. ೩೪೪<br>No. 344 |
|---|---|---|

## GOVERNMENT OF KARNATAKA

No. FD 10 PES 2026

Karnataka Government Secretariat
Vidhana Soudha,
Dr. B.R. Ambedkar Veedhi
Bengaluru,Dated: 30.04.2026.

## NOTIFICATION

The draft of the following Rules to further amend the Karnataka Excise (Sale of Indian and Foreign Liquors) Rules, 1968, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of the said section for information of all persons likely to be affected thereby and notice is hereby given that the said draft will be taken up for consideration after Seven days from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

**1. Title and commencement:-** (1) These Rules may be called the Karnataka Excise (Sale of Indian and Foreign Liquors) (Amendment) Rules, 2026.

(2) They shall come into force from the date of their final publication in the official Gazette.

**2. Amendment of Rule 3:-** In the Karnataka Excise (Sale of Indian and Foreign Liquors) Rules, 1968 (hereinafter referred to as the 'said rules'), in rule 3, for sub-rule (5), the following shall be substituted, namely:-

**"(5) Occasional licences** – These licences shall be issued in Form CL-5 for the sale, serve or sale and serving of Liquor to be drunk on the premises at Commercial Event, Non-Commercial Event, Tatkal Commercial Event and Tatkal Non-Commercial Event. For the purpose of these rules.

(i) Commercial Event means any event, function, programme, gathering or activity organized, conducted, sponsored or promoted with an element of commercial consideration, profit, revenue generation or business promotion, whether directly or indirectly. A Commercial Event is one, where an entry fee is charged to access the event.

E.g.- Cultual events, entertainment programme like public music programmes, ticketed shows, production sponsorship programmes, exhibition programmes, fair, Corporate functions, conferences, Workshops, New Year celebration, any other event conducted with the objective of commercial gain etc.,

(ii) Non-Commercial Event means any private or social function organized without any element of commercial consideration, profit or revenue generation and which is not conducted for business promotion or monetary gain. A Non-Commercial Event is one where no entry fee is charged to access the event and there is no mechanism through which payment is tied to the provision or consumption of liquor.

E.g.- Marriage, marriage reception and engagement, post wedding feast, birthday party, anniversary, family gatherings, Public gatherings/conferences without any commercial purpose, other non-commercial programmes etc.,

(iii) Tatkal Commercial Event means a Commercial Event in respect of which an application for the issuance of an Occasional Licence in Form CL-5 is submitted within 24 (twenty-four) hours immediately preceding the day of the event, and such application is considered and disposed of under an expedited procedure upon payment of the prescribed licence fees.

(iv) Tatkal Non-Commercial Event means a Non-Commercial Event in respect of which an application for the issuance of an Occasional Licence in Form CL-5 is submitted within 24 (twenty-four) hours immediately preceding the day of the event, and such application is considered and disposed of under an expedited procedure upon payment of the prescribed licence fees.

Provided that, where an Occasional licence has been obtained for a Non-Commercial event, and it is found that the licensee has conducted a Commercial event, then the same shall be deemed to be a violation of the licence conditions. In such cases, the licensee shall be liable to pay a fine equivalent to 3 (three) times the licence fee specified for a Commercial event**".**

**3. <u>Amendment of Rule 5</u>:-** In the said rules, in Rule 5, for the third proviso, the following shall be substituted, namely:-

**"**Provided also that, the Deputy Commissioner of Excise, upon receipt of an online application along with details uploaded by the applicant through the digital system, shall issue an Occasional licence in Form CL-5. Such Occasional Licences shall be auto-generated in electronic mode upon payment of the fees specified in Rule 8 and 8-A. The auto-generated copy of the licence shall be made available in the applicant's login**".**

**4. <u>Amendment of Rule 8</u>:-** In the said rules, in Rule 8, in sub-rule (1), for item 5 and the entries relating thereto, the following shall be substituted, namely:-

| | | |
|---|---|---|
| 5. | Occasional Licence referred to in clause (5) of Rule 3, in case of – | |
| | (a) Commercial Event | Rs.75,000 per day |
| | (b) Non-Commercial Event | Rs.20,000 per day |
| | (c) Tatkal Commerical Event | Rs.1,50,000 per day |
| | (d) Tatkal Non-Commerical Event | Rs.40,000 per day |

**5. <u>Amendment of Form CL-5:</u>-** In the said Rules, in Form CL-5, Condition No.2 and the entries relating thereto shall be omitted.

**By Order and in the Name of**

**The Governor of Karnataka,**

(Sd/-)

**(BHIMAPPA P. AJOOR)**
**Under Secretary to Government**

**Finance Department (Excise)**

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಆಇ 10 ಪಿಇಎಸ್ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30.04.2026.

<u>ಅಧಿಸೂಚನೆ</u>

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ

ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು -01 ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು.

**1. ಶೀರ್ಷಿಕೆ ಮತ್ತು ಪ್ರಾರಂಭ** :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 3 ರಲ್ಲಿ, ಉಪ-ನಿಯಮ **5** ರ ಬದಲಾಗಿ**,** ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

**"(5) ಸಾಂದರ್ಭಿಕ ಸನ್ನದುಗಳು-** ವಾಣಿಜ್ಯ ಕಾರ್ಯಕ್ರಮ, ವಾಣಿಜ್ಯೇತರ ಕಾರ್ಯಕ್ರಮ, ತತ್ಕಾಲ್ ವಾಣಿಜ್ಯ ಕಾರ್ಯಕ್ರಮ ಮತ್ತು ತತ್ಕಾಲ್ ವಾಣಿಜ್ಯೇತರ ಕಾರ್ಯಕ್ರಮಗಳ ಆವರಣದಲ್ಲಿ ಮದ್ಯವನ್ನು ಮಾರಾಟ ಮಾಡಲು, ಸರಬರಾಜು ಅಥವಾ ಮಾರಾಟ ಮತ್ತು ಸರಬರಾಜು ಮಾಡಲು ಈ ಸನ್ನದುಗಳನ್ನು ನಮೂನೆ ಸಿಎಲ್-5 ರಲ್ಲಿ ನೀಡಲಾಗುತ್ತದೆ. ಈ ನಿಯಮಗಳ ಉದ್ದೇಶಕ್ಕಾಗಿ, ಈ ಕಾರ್ಯಕ್ರಮಗಳಿಗೆ ಇಲ್ಲಿ ನೀಡಲಾದ ಅರ್ಥಗಳು ಅನ್ವಯವಾಗುತ್ತವೆ.

(i) ವಾಣಿಜ್ಯ ಕಾರ್ಯಕ್ರಮ ಎಂದರೆ ನೇರವಾಗಿ ಅಥವಾ ಪರೋಕ್ಷವಾಗಿ ವಾಣಿಜ್ಯಿಕ ಪರಿಗಣನೆ, ಲಾಭ, ಆದಾಯ ಗಳಿಕೆ ಅಥವಾ ವ್ಯಾಪಾರ ಪ್ರಚಾರದ ಅಂಶವನ್ನು ಹೊಂದಿರುವ ಯಾವುದೇ ಕಾರ್ಯಕ್ರಮ, ಸಮಾರಂಭ, ಕಾರ್ಯ, ಸಭೆ ಅಥವಾ ಚಟುವಟಿಕೆಗಳನ್ನು ಆಯೋಜಿಸುವುದು, ನಡೆಸುವುದು, ಪ್ರಾಯೋಜಿಸುವುದು ಅಥವಾ ಪ್ರಚಾರ ಮಾಡುವುದನ್ನು

ಸೂಚಿಸುತ್ತದೆ. ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಪ್ರವೇಶ ಶುಲ್ಕವನ್ನು ವಿಧಿಸಲಾಗುವ ಕಾರ್ಯಕ್ರಮವನ್ನು ವಾಣಿಜ್ಯ ಕಾರ್ಯಕ್ರಮ ಎಂದು ಪರಿಗಣಿಸಲಾಗುತ್ತದೆ.

ಉದಾಹರಣೆ- ಸಾಂಸ್ಕೃತಿಕ ಕಾರ್ಯಕ್ರಮಗಳು, ಮನರಂಜನಾ ಕಾರ್ಯಕ್ರಮ/ಸಾರ್ವಜನಿಕ ಸಂಗೀತ ಕಾರ್ಯಕ್ರಮಗಳು, ಟಿಕೆಟ್ ಆಧಾರಿತ ಪ್ರದರ್ಶನಗಳು, ಉತ್ಪಾದನಾ ಪ್ರಾಯೋಜಕತ್ವ ಕಾರ್ಯಕ್ರಮಗಳು, ಪ್ರದರ್ಶನ ಕಾರ್ಯಕ್ರಮಗಳು, ಜಾತ್ರೆ, ಕಾರ್ಪೊರೇಟ್ ಸಮಾರಂಭಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಹೊಸ ವರ್ಷದ ಸಂಭ್ರಮಾಚರಣೆ, ವಾಣಿಜ್ಯ ಲಾಭದ ಉದ್ದೇಶವಿಟ್ಟುಕೊಂಡು ನಡೆಸುವ ಇತರೆ ಯಾವುದೇ ಕಾರ್ಯಕ್ರಮಗಳು ಇತ್ಯಾದಿ.

(ii) ವಾಣಿಜ್ಯೇತರ ಕಾರ್ಯಕ್ರಮ ಎಂದರೆ ಯಾವುದೇ ವಾಣಿಜ್ಯಿಕ ಪರಿಗಣನೆ, ಲಾಭ ಅಥವಾ ಆದಾಯ ಗಳಿಕೆಯ ಅಂಶವಿಲ್ಲದೆ ಆಯೋಜಿಸಲಾದ ಮತ್ತು ವ್ಯಾಪಾರ ಪ್ರಚಾರ ಅಥವಾ ಆರ್ಥಿಕ ಲಾಭದ ಉದ್ದೇಶವಿಲ್ಲದೆ ಆಯೋಜಿಸಲಾದ ಖಾಸಗಿ ಅಥವಾ ಸಾಮಾಜಿಕ ಸಮಾರಂಭವನ್ನು ಸೂಚಿಸುತ್ತದೆ. ವಾಣಿಜ್ಯೇತರ ಕಾರ್ಯಕ್ರಮವೆಂದರೆ ಕಾರ್ಯಕ್ರಮಕ್ಕೆ ಪ್ರವೇಶಿಸಲು ಯಾವುದೇ ಪ್ರವೇಶ ಶುಲ್ಕವನ್ನು ವಿಧಿಸದಿರುವ ಹಾಗೂ ಮದ್ಯದ ಪೂರೈಕೆ ಅಥವಾ ಸೇವನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಪಾವತಿಯನ್ನು ಸಂಪರ್ಕಿಸುವ ವ್ಯವಸ್ಥೆ ಇಲ್ಲದಿರುವ ಕಾರ್ಯಕ್ರಮವಾಗಿರುತ್ತದೆ.

ಉದಾಹರಣೆ - ಮದುವೆ, ವಿವಾಹ ಆರತಕ್ಷತೆ ಮತ್ತು ನಿಶ್ಚಿತಾರ್ಥ, ಬೀಗರ ಔತಣಕೂಟ, ಹುಟ್ಟುಹಬ್ಬದ ಸಂತೋಷಕೂಟ, ವಾರ್ಷಿಕೋತ್ಸವ, ಕುಟುಂಬ ಕೂಟಗಳು, ಯಾವುದೇ ವಾಣಿಜ್ಯ ಉದ್ದೇಶವಿಲ್ಲದ ಸಾರ್ವಜನಿಕ ಕೂಟಗಳು/ಸಮ್ಮೇಳನಗಳು, ಇತರ ವಾಣಿಜ್ಯೇತರ ಕಾರ್ಯಕ್ರಮಗಳು ಇತ್ಯಾದಿ.

(iii) ತತ್ಕಾಲ್ ವಾಣಿಜ್ಯ ಕಾರ್ಯಕ್ರಮ ಎಂದರೆ ವಾಣಿಜ್ಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಮೂನೆ ಸಿಎಲ್-5 ನಲ್ಲಿ ಸಾಂದರ್ಭಿಕ ಸನ್ನದನ್ನು ನೀಡುವಂತೆ ಸಲ್ಲಿಸಲಾದ ಅರ್ಜಿಯನ್ನು ಕಾರ್ಯಕ್ರಮ ನಡೆಯುವ ದಿನದ ತಕ್ಷಣದ ಪೂರ್ವದ 24 (ಇಪ್ಪತ್ತ್ನಾಲ್ಕು) ಗಂಟೆಗಳ ಒಳಗೆ ಸಲ್ಲಿಸಲ್ಪಟ್ಟಿರುವ ಕಾರ್ಯಕ್ರಮವಾಗಿದ್ದು ಮತ್ತು ಅಂತಹ ಅರ್ಜಿಯನ್ನು ನಿಗದಿತ ಸನ್ನದು ಶುಲ್ಕವನ್ನು ಪಾವತಿಸಿದ ನಂತರ ತ್ವರಿತ ಕಾರ್ಯವಿಧಾನದ ಅಡಿಯಲ್ಲಿ ಪರಿಗಣಿಸಲಾಗುತ್ತದೆ ಮತ್ತು ವಿಲೇವಾರಿ ಮಾಡಲಾಗುತ್ತದೆ.

(iv) ತತ್ಕಾಲ್ ವಾಣಿಜ್ಯೇತರ ಕಾರ್ಯಕ್ರಮ ಎಂದರೆ ವಾಣಿಜ್ಯೇತರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಮೂನೆ ಸಿಎಲ್-5 ನಲ್ಲಿ ಸಾಂದರ್ಭಿಕ ಸನ್ನದನ್ನು ನೀಡುವಂತೆ ಸಲ್ಲಿಸಲಾದ ಅರ್ಜಿಯನ್ನು ಕಾರ್ಯಕ್ರಮ ನಡೆಯುವ ದಿನದ ತಕ್ಷಣದ ಪೂರ್ವದ 24 (ಇಪ್ಪತ್ತ್ನಾಲ್ಕು) ಗಂಟೆಗಳ ಒಳಗೆ ಸಲ್ಲಿಸಲ್ಪಟ್ಟಿರುವ ಕಾರ್ಯಕ್ರಮವಾಗಿದ್ದು ಮತ್ತು ಅಂತಹ ಅರ್ಜಿಯನ್ನು ನಿಗದಿತ ಸನ್ನದು ಶುಲ್ಕವನ್ನು ಪಾವತಿಸಿದ ನಂತರ ತ್ವರಿತ ಕಾರ್ಯವಿಧಾನದ ಅಡಿಯಲ್ಲಿ ಪರಿಗಣಿಸಲಾಗುತ್ತದೆ ಮತ್ತು ವಿಲೇವಾರಿ ಮಾಡಲಾಗುತ್ತದೆ.

ಪರಂತು, ವಾಣಿಜ್ಯೇತರ ಕಾರ್ಯಕ್ರಮಕ್ಕಾಗಿ ಸಾಂದರ್ಭಿಕ ಸನ್ನದನ್ನು ಪಡೆದು ಸನ್ನದುದಾರನು ವಾಣಿಜ್ಯ ಕಾರ್ಯಕ್ರಮವನ್ನು ನಡೆಸಿರುವುದು ಕಂಡುಬಂದರೆ, ಅದನ್ನು ಸನ್ನದು ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ, ಸನ್ನದುದಾರನು ವಾಣಿಜ್ಯ ಕಾರ್ಯಕ್ರಮಕ್ಕೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ನಿಗದಿಪಡಿಸಿದ ಸನ್ನದು ಶುಲ್ಕದ 3 (ಮೂರು) ಪಟ್ಟು ಮೊತ್ತಕ್ಕೆ ಸಮಾನವಾದ ದಂಡವನ್ನು ಪಾವತಿಸಲು ಬಾಧ್ಯನಾಗಿರುತ್ತಾನೆ**".**

3. **5 ನೇ ನಿಯಮದ ತಿದ್ದುಪಡಿ**:– ಸದರಿ ನಿಯಮಗಳ 5 ನೇ ನಿಯಮದಲ್ಲಿ, 3 ನೇ ಪರಂತುಕದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು**,** ಅಂದರೆ:-

**"**ಅಲ್ಲದೆ, ಅರ್ಜಿದಾರನು ಡಿಜಿಟಲ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಿದ ವಿವರಗಳೊಂದಿಗೆ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಿದ ನಂತರ**,** ಅಬಕಾರಿ ಉಪ ಆಯುಕ್ತರು ನಮೂನೆ ಸಿಎಲ್**-5** ರಲ್ಲಿ ಸಾಂದರ್ಭಿಕ ಸನ್ನದನ್ನು ನೀಡುತ್ತಾರೆ. ಅಂತಹ ಸಾಂದರ್ಭಿಕ ಸನ್ನದುಗಳನ್ನು ನಿಯಮ 8 ಮತ್ತು 8-ಎ ನಲ್ಲಿ ನಿರ್ದಿಷ್ಟಪಡಿಸಿದ ಶುಲ್ಕವನ್ನು ಪಾವತಿಸಿದ ನಂತರ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸ್ವಯಂಚಾಲಿತವಾಗಿ ಸೃಜಿಸಲಾಗುತ್ತದೆ. ಅರ್ಜಿದಾರರ ಲಾಗಿನ್‌ನಲ್ಲಿ ಸ್ವಯಂಚಾಲಿತವಾಗಿ ಸೃಜಿಸಲಾದ ಸನ್ನದಿನ ಪ್ರತಿಯನ್ನು ಲಭ್ಯವಾಗುವಂತೆ ಮಾಡತಕ್ಕದ್ದು**".**

**4. 8 ನೇ ನಿಯಮದ ತಿದ್ದುಪಡಿ**:– ಸದರಿ ನಿಯಮಗಳ 8 ನೇ ನಿಯಮದಲ್ಲಿ, ಉಪ-ನಿಯಮ (1) ರಲ್ಲಿ, 5 ನೇ ಬಾಬ್ತು ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

| | | |
|---|---|---|
| 5. | 3 ನೇ ನಿಯಮದ ಖಂಡ (5) ಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಲಾದ ಸಾಂದರ್ಭಿಕ ಸನ್ನದು, ಈ ಮುಂದಿನ ಸಂದರ್ಭದಲ್ಲಿ – | |
| | (ಎ) ವಾಣಿಜ್ಯ ಕಾರ್ಯಕ್ರಮ | ಪ್ರತಿ ದಿನಕ್ಕೆ ರೂ.75,000 |
| | (ಬಿ) ವಾಣಿಜ್ಯೇತರ ಕಾರ್ಯಕ್ರಮ | ಪ್ರತಿ ದಿನಕ್ಕೆ ರೂ.20,000 |
| | (ಸಿ) ತತ್ಕಾಲ್ ವಾಣಿಜ್ಯ ಕಾರ್ಯಕ್ರಮ | ಪ್ರತಿ ದಿನಕ್ಕೆ ರೂ.1,50,000 |
| | (ಡಿ) ತತ್ಕಾಲ್ ವಾಣಿಜ್ಯೇತರ ಕಾರ್ಯಕ್ರಮ | ಪ್ರತಿ ದಿನಕ್ಕೆ ರೂ.40,000 |

**5. ನಮೂನೆ ಸಿಎಲ್-5 ರ ತಿದ್ದುಪಡಿ**:– ಸದರಿ ನಿಯಮಗಳ ನಮೂನೆ ಸಿಎಲ್-5 ರಲ್ಲಿ, ಷರತ್ತು ಸಂಖ್ಯೆ 2 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು**.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಸಹಿ/-)
ಭೀಮಪ್ಪ.ಪ.ಅಜೂರ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH